ಅ.ದಾ. 98/2024 ಡಿಡಬ್ಲ್ಯೂ-1

ದಿನಾಂಕಃ 29.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಸ್.ಬಿ.ಎ. ವಕೀಲರಿಂದ:**

ಮೋಜಣಿ ಮಾಡುವ ಪೂರ್ವದಲ್ಲಿ ಆಜು-ಬಾಜುದಾರರಿಗೆ ನೋಟೀಸು ನೀಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಡಿ-11 ಮತ್ತು 12 ನ್ನು ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-12 ರಲ್ಲಿರುವ ಖಚಿತ ಮಾಹಿತಿ ನನಗಿರುವುದಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆಯು ಖರೀದಿಸಿರುತ್ತಾರೆ, ಅವರ ಮರಣದ ನಂತರ ನನ್ನ ತಾಯಿಯ ಹೆಸರಿಗೆ ನಾನೇ ಖಾತೆ ಮಾಡಿಸಿರುತ್ತೇನೆ. ನನ್ನ ತಂದೆಯು ಮರಣ ಹೊಂದುವ ಪೂರ್ವದಲ್ಲಿ ಇತರೆ ಯಾರಿಗೂ ದಾವಾ ಆಸ್ತಿಯ ಸಂಬಂಧ ಯಾವುದೇ ಬರವಣಿಗೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯು ಅವರ ಜೀವಿತಾಕಾಲದಲ್ಲಿ ದಾವಾ ಸ್ವತ್ತನ್ನು ಯಾರ ಹೆಸರಿಗೂ ವರ್ಗಾಯಿಸಿರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ 5 ಜನ ಮಕ್ಕಳು. ನನ್ನ ತಂದೆಯು ಮರಣ ಹೊಂದುವ ಪೂರ್ವದಲ್ಲಿ ದಾವಾ ಸ್ವತ್ತನ್ನು ಯಾರಿಗೂ ವರ್ಗಾಯಿಸದೇ ಇದ್ದ ಕಾರಣ ಎಲ್ಲಾ ಸಹೋದರ ಹಾಗೂ ಸಹೋದರಿಯರಿಗೂ ಸಮಾನವಾದ ಹಕ್ಕು ಇದೆ ಎಂದರೆ ಸಾಕ್ಷಿಯು ನನಗೆ ಮರಣ ಹೊಂದುವ ಪೂರ್ವದಲ್ಲಿಯೇ ನನ್ನ ತಂದೆ ಪಾಲನ್ನು ನೀಡಿದ್ದರು ಎಂದು ನುಡಿಯುತ್ತಾರೆ. ನಿಡಿ-11 ಮತ್ತು 12 ನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-11 ಮತ್ತು 12 ರ ಪೂರಕವಾಗಿ ನಿಡಿ-1 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿಯು ಒಪ್ಪಿ ನನಗೆ ದಾನ ಪತ್ರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಂದೆಯು ಮರಣದ ಪೂರ್ವದಲ್ಲಿ ದಾವಾ ಆಸ್ತಿಯನ್ನು ಯಾರಿಗೂ ವರ್ಗಾಯಿಸದೇ ಇದ್ದ ಕಾರಣ ಕೇವಲ ನನ್ನ ತಾಯಿಗೆ ದಾನ ಪತ್ರ ಮಾಡಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ವಯಸ್ಸಾಗಿರುವ ಕಾರಣ ಮತ್ತು ಕಿವಿ ಕೇಳದೇ ಇರುವ ಕಾರಣ ಅದನ್ನು ದುರುಪಯೋಗಪಡಿಸಿಕೊಂಡು ನಿಡಿ-1, 11 ಮತ್ತು 12 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ 1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.